ಅರ್ಜುನನ ಯೋಗ್ಯತೆ ಶ್ರೀಕೃಷ್ಣನಿಗೆ ಗೊತ್ತಿತ್ತು, ಅವನ ವೈರಾಗ್ಯ ಯಥಾರ್ಥವಾದುದಲ್ಲ; ಬಾಹ್ಯನಿಮಿತ್ತವಾಗಿ ಉಂಟಾದ ಅದು ತಾತ್ಕಾಲಿಕವಾದುದು ಎಂಬುದು ಶ್ರೀಕೃಷ್ಣನಿಗೆ ಸ್ಪಷ್ಟವಾಗಿತ್ತು. ಆದರೆ ಅರ್ಜುನನು ಈ ಅಭಾವವೈರಾಗ್ಯದ ಪ್ರಭಾವಕ್ಕೆ ಒಳಗಾಗಿ ತನ್ನ ಸ್ವಧರ್ಮವನ್ನು ಬಿಟ್ಟು ಸಂನ್ಯಾಸ ಧರ್ಮವನ್ನು ಸ್ವೀಕರಿಸಲು ಹೊರಟಿದ್ದನು. ಶ್ರೀಕೃಷ್ಣನು, **ಮಿಥ್ಯೈವ ವ್ಯವಸಾಯಸ್ತೇ** – "ನಿನ್ನ ಈ ಕಾರ್ಯ ಮಿಥ್ಯೆ, ಯಥಾರ್ಥ ವೈರಾಗ್ಯದಿಂದ ಉಂಟಾದುದಲ್ಲ" ಎಂದು ಛೇಡಿಸುತ್ತಾನೆ. ಮತ್ತೆ ಅವನನ್ನು ಸ್ವಧರ್ಮವಾದ ಕ್ಷಾತ್ರ ಪ್ರವೃತ್ತಿಯಲ್ಲಿ ತೊಡಗಿಸುತ್ತಾನೆ.

ಆದ್ದರಿಂದ ಸ್ವಧರ್ಮವೆಂದರೆ ಅವರವರ ವಿಕಾಸದ ಹಂತ ಮತ್ತು ಯೋಗ್ಯತೆಗೆ ಅನುಗುಣವಾಗಿ ವರ್ತಿಸುವುದು. ಒಂದು ಮಗು ಅಥವಾ ವೃದ್ಧನಾದವನು ಮಧ್ಯವಯಸ್ಕರೊಡನೆ ಓಟದ ಸ್ಪರ್ಧೆಯಲ್ಲಿ ಭಾಗವಹಿಸಲಾಗುವುದಿಲ್ಲ. ಇಲ್ಲಿ 'ಪರಧರ್ಮ' ನಿಜವಾಗಿಯೂ 'ಭಯಾವಹ'ವಾಗುತ್ತದೆ! ಇಲ್ಲಿ ಒಂದು ತಮಾಷೆಯ ಕಥೆಯನ್ನು ಹೇಳಬಹುದು. ಸುಪ್ರಸಿದ್ಧ ವಿಜ್ಞಾನಿಯಾದ ಐನ್‌ಸ್ಟೈನ್ ಅನೇಕ ಭಾಷಣಗಳನ್ನು ಕೊಡಲು ಹೋಗಬೇಕಾಗಿತ್ತು. ಅವರ ವಾಹನದ ಡ್ರೈವರ್ ಅವೆಲ್ಲವನ್ನೂ ಆಲಿಸುತ್ತಿದ್ದ. ಹೀಗಾಗಿ ಅವರು ಕೊಡುವ ಇಡೀ ಭಾಷಣ ಅವನಿಗೆ ಬಾಯಿಪಾಠವಾಗಿತ್ತು. ಒಂದು ಕಡೆ ಹೋದಾಗ ಐನ್‌ಸ್ಟೈನ್ ತಮ್ಮ ಡ್ರೈವರ್‌ಗೇ ಭಾಷಣ ಮಾಡಲು ಬಿಟ್ಟುಕೊಟ್ಟರು. ಡ್ರೈವರ್ ತಾನು ಬಾಯಿಪಾಠ ಮಾಡಿದ್ದನ್ನೆಲ್ಲಾ ಒಪ್ಪಿಸಿದ. ಕೊನೆಗೆ ಪ್ರಶ್ನೋತ್ತರ ಕಾರ್ಯಕ್ರಮ ಆರಂಭವಾಯಿತು. ಒಬ್ಬರು ಒಂದು ಕ್ಲಿಷ್ಟವಾದ ಪ್ರಶ್ನೆ ಕೇಳಿದರು. ಅದಕ್ಕೆ ಡ್ರೈವರ್ ಉತ್ತರಿಸಲಾಗಲಿಲ್ಲ. ಆದರೂ ಅವನು ತನ್ನ ಬುದ್ಧಿವಂತಿಕೆಯನ್ನು ಉಪಯೋಗಿಸಿದ. "ಅದೇನು ಮಹಾ! ನನ್ನ ಡ್ರೈವರ್ ಕೂಡ ಈ ಪ್ರಶ್ನೆಗೆ ಉತ್ತರಿಸಬಲ್ಲ" ಎನ್ನುತ್ತಾ, ಐನ್‌ಸ್ಟೈನ್ ಅವರ ಕಡೆಗೆ ನೋಡಿದ. ಐನ್‌ಸ್ಟೈನ್ ಎದ್ದು ನಿಂತು ಅದಕ್ಕೆ ಉತ್ತರ ಕೊಡಬೇಕಾಯಿತು. ಈ ಘಟನೆ ನಿಜವೋ ಸುಳ್ಳೋ ಗೊತ್ತಿಲ್ಲ. ಆದರೆ ಒಬ್ಬನು ತನ್ನ ಸ್ವಧರ್ಮವನ್ನು ಮಾತ್ರ ಪಾಲಿಸಬೇಕು, ಪರಧರ್ಮವು ಭಯವನ್ನು ಉಂಟು ಮಾಡುವಂಥದ್ದು ಎನ್ನುವುದನ್ನು ಇದು ಮಾರ್ಮಿಕವಾಗಿ ಎತ್ತಿತೋರಿಸುತ್ತದೆ.

ಆಧ್ಯಾತ್ಮಿಕ ಸಾಧನೆಯಲ್ಲಿ ಒಬ್ಬ ವ್ಯಕ್ತಿಯು ಹಂತಹಂತವಾಗಿ ಮುಂದುವರಿಯಬೇಕಾಗುತ್ತದೆ. ಪ್ರಾರಂಭದ ಹಂತದಲ್ಲಿರುವ ಸಾಧಕನು ತುಂಬ ಮುಂದುವರಿದ ಸಾಧಕನಂತೆ ಧ್ಯಾನಜಪಾದಿಗಳಲ್ಲಿ ತೊಡಗಿದರೆ, ತಲೆ ಕೆಟ್ಟುಹೋಗಬಹುದು, ಇಲ್ಲವೇ ಹಳೆಯ ಸಂಸ್ಕಾರಗಳಿಗೆ ಬಲಿಯಾಗಿ ಪದಚ್ಯುತನಾಗಬಹುದು. ಸ್ವಾಮಿ ಬ್ರಹ್ಮಾನಂದರು ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತಾರೆ. ಒಬ್ಬ ವ್ಯಕ್ತಿಯು ಒಂದೊಂದೇ ಮೆಟ್ಟಿಲನ್ನು ಹತ್ತಿ ಮಹಡಿಗೆ ಹೋಗಬೇಕು, ಅದನ್ನು ಬಿಟ್ಟು ಯಾರಾದರೂ ಅವನನ್ನು ಮಹಡಿಯ ಮೇಲೆ ಎಸೆದರೆ ಅವನ ಗತಿ ಏನಾಗುತ್ತದೆ? ಇಲ್ಲಿಯೂ 'ಪರಧರ್ಮ'ವೆನ್ನುವುದು 'ಭಯಾವಹ'ವಾಗುವುದು ನಿಶ್ಚಿತ!

ಕರ್ಮಯೋಗದ ಸಾಧನೆಯಲ್ಲಿ ಸಾಕಷ್ಟು ಮುಂದುವರಿದು, ಮನಸ್ಸು ಪರಿಪಕ್ವವೂ ಪವಿತ್ರವೂ ಆದ ಮೇಲೆ ಕರ್ಮವನ್ನು ತೊರೆದು, ಉನ್ನತ ಮಟ್ಟದ ಸಾಧನೆಯಲ್ಲಿ ತೊಡಗಲು ಸಾಧ್ಯವಾಗುತ್ತದೆ. ಹೀಗೆ ಮಾಡದೆ, ಪ್ರಾರಂಭದಲ್ಲಿಯೇ ಕರ್ಮವನ್ನು ಬಿಟ್ಟುಬಿಟ್ಟರೆ ವ್ಯಕ್ತಿಯು ಆಲಸ್ಯಕ್ಕೆ ಒಳಗಾಗುತ್ತಾನೆ; ಸಾಧನೆಯ ಹೆಸರಿನಲ್ಲಿ ಜೀವನವನ್ನು ವ್ಯರ್ಥಗೊಳಿಸುತ್ತಾನೆ. ಅವನು ದೇವರನ್ನು ಪಡೆಯದಿರುವುದು ಮಾತ್ರವಲ್ಲದೆ, ತನ್ನನ್ನೂ ಕಳೆದುಕೊಳ್ಳುತ್ತಾನೆ.

**ಯಸ್ತ್ವಾತ್ಮರತಿರೇವ ಸ್ಯಾತ್ ಆತ್ಮತೃಪ್ತಶ್ಚ ಮಾನವಃ। ಆತ್ಮನ್ಯೇವ ಚ ಸಂತುಷ್ಟಃ ತಸ್ಯಕಾರ್ಯಂ ನ ವಿದ್ಯತೇ ॥**

"ಯಾವ ವ್ಯಕ್ತಿಯು ಆತ್ಮನಲ್ಲಿಯೇ ರಮಿಸುವನೊ, ಆತ್ಮನಲ್ಲಿಯೇ ತೃಪ್ತನಾಗಿರುವನೊ, ಆತ್ಮನಲ್ಲಿಯೇ ಸಂತೋಷವನ್ನು ಅನುಭವಿಸುವನೋ ಅವನಿಗೆ ಕರ್ತವ್ಯಗಳಾವುವೂ ಇರುವುದಿಲ್ಲ." (೩:೧೭)

ಇಂಥವನ ಯೋಗಕ್ಷೇಮವನ್ನು ಭಗವಂತನೇ ನೋಡಿಕೊಳ್ಳುತ್ತಾನೆ. ಅವನು ಗುಣಾತೀತನಾಗಿರುವುದರಿಂದ ವಿಧಿ–ನಿಷೇಧಗಳಾವುವೂ ಅವನಿಗೆ ಇರುವುದಿಲ್ಲ. **ನಿಸ್ತ್ರೈಗುಣ್ಯೇ ಪಥಿ ವಿಚರತಃ ಕೋ ವಿಧಿಃ ಕೋ ನಿಷೇಧಃ** – ನಿರ್ಗುಣ ಮಾರ್ಗದಲ್ಲಿ ಸಂಚರಿಸುತ್ತಿರುವವನಿಗೆ ಯಾವ ವಿಧಿ, ಯಾವ ನಿಷೇಧ?

ಈ ಹಂತದಿಂದ ಕೆಳಗಿರುವವರೆಲ್ಲರೂ ಅವರವರಿಗೆ ಯೋಗ್ಯವಾದ ಕರ್ಮವನ್ನು ಮಾಡಲೇಬೇಕೆಂದು ಶ್ರೀಕೃಷ್ಣನು ವಿಧಿಸುತ್ತಾನೆ. **ನ ಕರ್ಮಣಾಮನಾರಂಭತ್ ನೈಷ್ಕರ್ಮ್ಯಂ ಪುರುಷೋಽಶ್ನುತೇ** (೩.೪) "ಕೇವಲ ಕರ್ಮವನ್ನು ಮಾಡದೇ ಇರುವುದರಿಂದ ನೈಷ್ಕರ್ಮ್ಯಸಿದ್ಧಿ ಉಂಟಾಗುವುದಿಲ್ಲ" ಎಂದು ಅವನು ಹೇಳುತ್ತಾನೆ. ಕರ್ಮವನ್ನು ಮಾಡುತ್ತಲೇ ಕರ್ಮಬಂಧನದಿಂದ ಪಾರಾಗಬೇಕು. ಕರ್ಮ ತಾನಾಗಿಯೇ ಬಿದ್ದುಹೋಗಬೇಕು, ನಾವಾಗಿಯೇ ಒತ್ತಾಯಪೂರ್ವಕವಾಗಿ ಕರ್ಮವನ್ನು ಬಿಡಬಾರದು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅವರು ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತಾರೆ: ಗಾಯ ವಾಸಿಯಾಗುವಾಗ ಅದರ ಮೇಲೆ ಒಂದು ಪೊರೆ ಉಂಟಾಗುತ್ತದೆ. ಅದು ತಾನಾಗಿಯೇ ಬಿದ್ದುಹೋಗುವವರೆಗೂ ನಾವು ಕಾಯಬೇಕು. ನಾವಾಗಿಯೇ ಬಲಾತ್ಕಾರವಾಗಿ ಕಿತ್ತರೆ ಗಾಯ ಇನ್ನಷ್ಟು ಉಲ್ಬಣವಾಗುತ್ತದೆ. ಅಪಘಾತದಲ್ಲಿ ಕೈ ಅಥವಾ ಕಾಲು ಮುರಿದುಹೋದಾಗ ವೈದ್ಯರು ಬ್ಯಾಂಡೇಜ್ ಕಟ್ಟುತ್ತಾರೆ. ಎಲುಬು ಕೂಡಿಕೊಳ್ಳುವವರೆಗೂ ಆ ಬ್ಯಾಂಡೇಜ್ ಅನ್ನು ತೆಗೆಯುವಂತಿಲ್ಲ. ಹಾಗೆಯೇ ಅಂತರಂಗದ ಅವಿದ್ಯೆಯೆಂಬ ಗಾಯವು ವಾಸಿಯಾಗುವವರೆಗೂ ಕರ್ಮದ ಬ್ಯಾಂಡೇಜೂ ಅವಶ್ಯಕ. ಇದನ್ನೇ ಶ್ರೀಕೃಷ್ಣನು 'ಸ್ವಧರ್ಮನಿಷ್ಠೆ' ಎಂದು ಕರೆಯುವುದು.

(ಮುಂದುವರಿಯುವುದು)

ಇಂದ್ರಾಣಿ ಬಾಲು

# ಶ್ರೀಮಾತೆಯವರ ಚಿರಸಂಗಿನಿ ಯೋಗಿನ್‌ಮಾ

**ಶ್ರೀಮಾತೆಯವರ ಸಖಿಯರಲ್ಲಿ ಯೋಗಿನ್‌ಮಾ ಬಹಳ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಸಂಸಾರದ ಬೆಂಕಿಯಲ್ಲಿ ಬೆಂದರೂ ಚಿನ್ನದಂತೆ ಪರಿಪಕ್ವವಾದ ಅಧ್ಯಾತ್ಮ ಜೀವನವನ್ನು ನಡೆಸಿದ್ದಾರೆ. ಇವರ ಜೀವನದ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕಿ ಬೆಂಗಳೂರಿನ ಶ್ರೀಶಾರದಾಮಠದ ಆತ್ಮೀಯ ಭಕ್ತರಲ್ಲಿ ಒಬ್ಬರು.**



**ತ**ಪಸ್ಸು ಮುಕ್ತಿಗೆ ಹೆದ್ದಾರಿ ಎಂದು ನಮ್ಮ ಸಂಸ್ಕೃತಿ ಹೇಳುತ್ತದೆ. ಋಷಿಮುನಿಗಳು, ಸಂತರು ಮುಂತಾದವರು ತಪಸ್ಸಿನ ಮೂಲಕವೇ ಭಗವಂತನನ್ನು ಪಡೆದಿದ್ದಾರೆ. ಅಷ್ಟೇಕೆ ಭಗವಂತನೂ ಕೂಡ ಈ ಧರೆಗೆ ಅವತರಿಸಿದಾಗ, 'ತಪಸ್ಸಿನ ಮೂಲಕವೇ ಭಗವಂತನನ್ನು ಪಡೆಯಬಹುದು' ಎಂದು ಸಾಮಾನ್ಯ ಮನುಷ್ಯರಿಗೆ ತೋರಿಸಿಕೊಟ್ಟಿದ್ದಾನೆ. ಇಂತಹ ನಮ್ಮ ಪುರಾತನ ಸಂಸ್ಕೃತಿಯು ಪ್ರತಿಪಾದಿಸಿದ ಒಂದು ಬಹು ದೊಡ್ಡ ಆದರ್ಶಜೀವನವನ್ನು ಯೋಗಿನ್‌ಮಾ ಬಾಳಿಬದುಕಿದರು. ಅವರು ತಮ್ಮ ಜೀವನದಲ್ಲಿ ಸೇವೆಯ ಮೂಲಕ ಅತ್ಯಂತ ಮಧುರ ವ್ಯಕ್ತಿತ್ವವನ್ನು ಗಳಿಸಿದ್ದಲ್ಲದೆ, ಆಧ್ಯಾತ್ಮಿಕ ಜೀವನದ ತುತ್ತತುದಿಯನ್ನೂ ಮುಟ್ಟಿದ್ದರು. ಯೋಗಿನ್‌ಮಾ ಸಾಧಾರಣ ಮಹಿಳೆಯಲ್ಲ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಶ್ರೀರಾಮಕೃಷ್ಣರ ಅವತಾರದ ಫಲವಾಗಿ, ಭಾರತ ವರ್ಷದಲ್ಲಿ ಮೈತ್ರೇಯಿ, ಗಾರ್ಗಿ ಮತ್ತು ಅನೇಕ ಉಚ್ಚಸ್ತರದ ತಪಸ್ವಿನಿಯರು ಹುಟ್ಟಿಬರುತ್ತಾರೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಯೋಗಿನ್‌ಮಾ ಮತ್ತು ಗೋಲಾಪ್‌ಮಾ ಇಂತಹವರಲ್ಲಿ ಅಗ್ರಗಣ್ಯರು ಎಂದು ಹೇಳಬಹುದು. ಶ್ರೀಮಾತೆಯವರೇ ಸ್ವತಃ ಹೇಳುತ್ತಾರೆ, "ಯೋಗಿನ್ ನನ್ನ ಜಯಾ, ನನ್ನ ಸೇವಕಿ, ಸ್ನೇಹಿತೆ ಮತ್ತು ನನ್ನ ಚಿರಸಂಗಿನಿ" ('ಜಯಾ' ದೇವಿ ದುರ್ಗೆಯ ಸಖಿಯರಲ್ಲಿ ಒಬ್ಬಳು).

ಯೋಗೀಂದ್ರ ಮೋಹಿನಿ ಬಿಸ್ವಾಸ್ ಒಬ್ಬ ಜ್ಞಾನತಪಸ್ವಿನಿಯೇ ಸರಿ. ಇವರ ಜನನ ೧೮೫೧ ರ ಜನವರಿ ೧೬ ರಂದು ಕೊಲ್ಕತಾದಲ್ಲಿ ಆಯಿತು. ಇವರ ಮನೆ ಪರಮಹಂಸರ ಪರಮಭಕ್ತನಾದ ಬಲರಾಮಬಾಬುವಿನ ಮನೆಯ ಹತ್ತಿರವೇ ಇತ್ತು. ಇವರ ತಂದೆ ಪ್ರಸನ್ನಕುಮಾರ್ ಮಿತ್ರ ಕೊಲ್ಕತಾದ ಖ್ಯಾತ ವೈದ್ಯರಾಗಿದ್ದುದಲ್ಲದೆ, ಕೊಲ್ಕತಾ ಮೆಡಿಕಲ್ ಕಾಲೇಜಿನಲ್ಲಿ ಪಾಠ ಹೇಳುವುದಕ್ಕೂ ಹೋಗುತ್ತಿದ್ದರು. ಇವರ ಮನೆಯ ಪರಿಸ್ಥಿತಿ ಚೆನ್ನಾಗಿದ್ದು, ಇವರ ತೋಟದ ಮಧ್ಯದಲ್ಲಿ ಒಂದು ಶಿವಾಲಯವೂ ಇತ್ತು. ಯೋಗಿನ್‌ಮಾ ಇವರ ಎರಡನೆಯ ಮಗಳು. ಆಗಿನ ಕಾಲದ ಸಮಾಜದ ರೀತಿಯಂತೆ, ಇವರಿಗೆ ಏಳನೆಯ ವಯಸ್ಸಿನಲ್ಲಿಯೇ, ಅಂಬಿಕಾಚರಣ ಬಿಸ್ವಾಸ್ ಎಂಬ ಖರ್ದಾ ಪ್ರದೇಶದ ಬಹು ದೊಡ್ಡಮನೆತನದ ಹುಡುಗನೊಂದಿಗೆ ವಿವಾಹವಾಯಿತು. ಈಗ ಯೋಗಿನ್‌ಮಾರ ತಂದೆ ತಾಯಿಗಳು ಒಳ್ಳೆಯ ಭಕ್ತಕುಟುಂಬದಲ್ಲಿ ಆಕೆಯ ವಿವಾಹವಾಯಿತೆಂದು ಸಂತೋಷದಿಂದಿದ್ದರು. ವಯಸ್ಸಿಗೆ ಬಂದನಂತರ ಯೋಗಿನ್‌ಮಾ ಪತಿಯ ಗೃಹದಲ್ಲಿ ವಾಸಮಾಡತೊಡಗಿದರು. ಆಗ ಅವರಿಗೆ ವಾಸ್ತವಿಕ ಪರಿಸ್ಥಿತಿ ತಿಳಿಯಿತು. ಅಂಬಿಕಾಚರಣ ಪಿತ್ರಾರ್ಜಿತವಾಗಿ ಬಹಳ ಆಸ್ತಿ, ಹಣಕಾಸುಗಳನ್ನು ಪಡೆದಿದ್ದನು. ಆದರೆ ಅವನ ಜೀವನದ ರೀತಿನೀತಿಗಳು ಸರಿಯಿಲ್ಲದೆ ಎಲ್ಲಾ ಆಸ್ತಿಯನ್ನೂ ಕಳೆದುಕೊಂಡನು. ಯೋಗಿನ್‌ಮಾ ಅವನ ಜೊತೆಯಲ್ಲಿ ಅನೇಕ ವರ್ಷಗಳ ಕಾಲ ಬಾಳಿ, ಅವನನ್ನು ಒಳ್ಳೆಯ ಮಾರ್ಗಕ್ಕೆ ತರಲು ಬಹಳ ಪ್ರಯತ್ನಪಟ್ಟರು. ಆದರೆ ಅದೆಲ್ಲವೂ ವಿಫಲವಾಯಿತು. ಕಟ್ಟಕಡೆಗೆ ಅಂಬಿಕಾಚರಣನ ಕೆಟ್ಟ ನಡತೆಯನ್ನು ಸಹಿಸಲಾರದೆ, ಯೋಗಿನ್‌ಮಾ ತವರುಮನೆಗೆ ಹಿಂತಿರುಗಿದರು. ಆಗ ಅವರಿಗೆ ಗಾನು ಎಂಬ ಮಗಳು ಮಾತ್ರ ಇದ್ದಳು. ಶಾಂತಿ ಮತ್ತು ಸಮಾಧಾನದ ಗೃಹಸ್ಥಜೀವನದ ಕನಸೆಲ್ಲಾ ಹಾಳಾಗಿ, ಕಟ್ಟಕಡೆಯಲ್ಲಿ ಅವರ ಮನಸ್ಸಿನಲ್ಲಿ ಯಾವುದೋ ಒಂದು ಹೇಳಲಾಗದ ಕೊರತೆ ಮತ್ತು ನೀರಸ ಜೀವನ ಮಾತ್ರ ಉಳಿದವು.

ಈ ಸಮಯದಲ್ಲಿ ಪರಮಹಂಸರ ಭಕ್ತನಾದ ಬಲರಾಮಬಾಬುವಿನ ಮನೆಗೆ ಶ್ರೀರಾಮಕೃಷ್ಣರು ಆಗಮಿಸಿದರು. ಆಗ ಬಲರಾಮಬಾಬು ಯೋಗಿನ್‌ಮಾಳನ್ನು ತಮ್ಮ ಮನೆಗೆ ಕರೆತಂದರು. ಯೋಗಿನ್‌ಮಾ ಅಲ್ಲಿಗೆ ಹೋದಾಗ ಪರಮಹಂಸರು ಸಮಾಧಿಸ್ಥಿತಿಯಲ್ಲಿದ್ದರು. ಅಲ್ಲಿದ್ದವರೆಲ್ಲರೂ ಪರಮಹಂಸರಿಗೆ ನಮಸ್ಕರಿಸುತ್ತಿದ್ದರು. ಯೋಗಿನ್‌ಮಾ ಕೂಡ ಹೋಗಿ ನಮಸ್ಕರಿಸಿದರು. ಆದರೆ ಅದರಿಂದ ಅವರ ಮೇಲೆ ಹೆಚ್ಚಿನ ಪ್ರಭಾವವೇನೂ ಆಗಲಿಲ್ಲ. "ಒಬ್ಬ ಕುಡುಕನ ಜೀವನದಿಂದ ನನ್ನ ಗೃಹಸ್ಥಜೀವನ

ಹಾಳಾಯಿತು, ಮತ್ತೊಬ್ಬ ಕುಡುಕನ ಸಹವಾಸದಿಂದ ನನ್ನ ಆಧ್ಯಾತ್ಮಿಕ ಜೀವನವನ್ನೇಕೆ ಕಳೆದುಕೊಳ್ಳಬೇಕು?" ಎಂದು ಅವರು ಭಾವಿಸಿದರು. ಶ್ರೀರಾಮಕೃಷ್ಣರ ಸಮಾಧಿಸ್ಥಿತಿಯನ್ನು ಅವರು ಕುಡಿತದ ಪರಿಣಾಮ ಎಂದುಕೊಂಡಿದ್ದರು. ಬಲರಾಮಬಾಬು ಆಗಾಗ್ಗೆ ತಮ್ಮ ಮನೆಯ ಸ್ತ್ರೀಯರೊಂದಿಗೆ ದಕ್ಷಿಣೇಶ್ವರಕ್ಕೆ ಹೋಗುತ್ತಿದ್ದರು. ಆಗೆಲ್ಲ ಒತ್ತಾಯದಿಂದ ಯೋಗಿನ್‌ಮಾರನ್ನೂ ಕರೆದುಕೊಂಡು ಹೋಗುತ್ತಿದ್ದರು. ಈಗ ಅವರಿಗೆ ಶ್ರೀರಾಮಕೃಷ್ಣರ ಬಗ್ಗೆ ಆಕರ್ಷಣೆ ಉಂಟಾಯಿತು; ಅವರ ಮಾತುಗಳನ್ನು ಕೇಳಬೇಕೆಂಬ ಆಸೆ ಹೆಚ್ಚಾಯಿತು. ಪರಮಹಂಸರು ಯೋಗಿನ್‌ಮಾರನ್ನು ಶ್ರೀಮಾತೆಯವರಿಗೆ ಪರಿಚಯಿಸಿದರು. ತಕ್ಷಣವೇ ಇಬ್ಬರಿಗೂ ನಿಕಟ ಸ್ನೇಹಭಾವ ಬೆಳೆಯಿತು. ಸ್ವಲ್ಪ ದಿನಗಳ ನಂತರ ಶ್ರೀಮಾತೆಯವರು ಜಯರಾಂಬಾಟಿಗೆ ಹೋದಾಗ, ಅವರ ಅಗಲಿಕೆಯ ನೋವಿನಿಂದ, ಯೋಗಿನ್‌ಮಾ ಬಿಕ್ಕಿ ಬಿಕ್ಕಿ ಅತ್ತರು. ಆಗ ಪರಮಹಂಸರೇ ಅವರನ್ನು ಸಮಾಧಾನಪಡಿಸಿದರು.

ಯೋಗಿನ್‌ಮಾ ಆಗಾಗ್ಗೆ ದಕ್ಷಿಣೇಶ್ವರಕ್ಕೆ ಬಂದು ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆಯವರಿಗೆ ಸೇವೆ ಸಲ್ಲಿಸುತ್ತಿದ್ದರು. ಶ್ರೀಮಾತೆಯವರಿಗೆ ತಲೆಬಾಚಿ ಜಡೆ ಹಾಕುತ್ತಿದ್ದರು. ಇದು ಶ್ರೀಮಾತೆಯವರಿಗೆ ಬಹು ಪ್ರಿಯವಾಗಿತ್ತು. ಆದ್ದರಿಂದ ಯೋಗಿನ್‌ಮಾ ಪುನಃ ಬರುವವರೆಗೆ ಅದನ್ನು ಬಿಚ್ಚುತ್ತಲೇ ಇರಲಿಲ್ಲ. ಇದಲ್ಲದೆ ಯೋಗಿನ್‌ಮಾ ಶ್ರೀರಾಮಕೃಷ್ಣರಿಗೆ ಅನೇಕ ವಿಧವಾದ ವ್ಯಂಜನಗಳನ್ನು ಮಾಡಿ ತರುತ್ತಿದ್ದರು. ಶ್ರೀಮಾತೆಯವರು ನಾಚಿಕೆಯ ಸ್ವಭಾವದವರಾದ್ದರಿಂದ, ಯಾರ ಹತ್ತಿರವೂ ಏನನ್ನಾದರೂ ಕೇಳಲು ಸಂಕೋಚ ಪಡುತ್ತಿದ್ದರು. ಅವರು ಒಮ್ಮೆ ಯೋಗಿನ್‌ಮಾರಿಗೆ ಹೇಳಿದರು, "ನೋಡು ಯೋಗಿನ್, ನಿಮಗೆಲ್ಲ ಭಾವಸಮಾಧಿಯ ಅನುಭವವಾಗಿದೆ. ನನಗಿನ್ನೂ ಆಗಿಲ್ಲವಲ್ಲ, ನೀನು ಪರಮಹಂಸರಿಗೆ ಹೇಳುವೆಯಾ?" ಇದಕ್ಕೆ ಯೋಗಿನ್‌ಮಾ ಒಪ್ಪಿ ಪರಮಹಂಸರಿಗೆ ತಿಳಿಸಿದರು. ಶ್ರೀರಾಮಕೃಷ್ಣರು ಇದನ್ನು ಕೇಳಿ ಮೊದಲು ನಕ್ಕು, ನಂತರ ಗಂಭೀರ ವಾದರು. ಸ್ವಲ್ಪ ಹೊತ್ತಿನ ಮೇಲೆ ಯೋಗಿನ್‌ಮಾ ನಹಬತ್‌ಖಾನೆಗೆ ಬಂದು ನೋಡುತ್ತಾರೆ, ಶ್ರೀಮಾತೆಯವರು ಭಾವ ಸಮಾಧಿಯಲ್ಲಿ ಮುಳುಗಿದ್ದರು.

ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆಯವರ ಸಹವಾಸದಿಂದ ಯೋಗಿನ್‌ಮಾರ ಆಧ್ಯಾತ್ಮಿಕ ತೃಷ್ಣೆ ಹೆಚ್ಚಾಯಿತು. ಈಗ ಅವರು ಜಪ ತಪ, ಸಾಧನೆ ಶಾಸ್ತ್ರಾಧ್ಯಯನ – ಇವುಗಳನ್ನು ಹೆಚ್ಚಿಸುತ್ತಾ ಹೋದರು. ಅಧ್ಯಾತ್ಮದ ಪಿಪಾಸೆ ಒಂದು ಒಳ್ಳೆಯ ಸಂಕೇತವೇ. ಆದರೆ ಯೋಗಿನ್‌ಮಾಗೆ ಆಗಾಗ್ಗೆ ತಮ್ಮ ಜೀವನ ನೀರಸವೆಂಬ ಭಾವನೆ ಉಂಟಾಗುತ್ತಿತ್ತು. ಒಂದು ದಿನ ಅವರು ದೃಢವಾದ ತೀರ್ಮಾನದಿಂದ ದಕ್ಷಿಣೇಶ್ವರಕ್ಕೆ ಹೋದರು. ಅಲ್ಲಿನ ತೋಟದಲ್ಲಿದ್ದ ಕೆಲವು ಹೂವುಗಳನ್ನು ಕಿತ್ತರು. ಯೋಗಿನ್‌ಮಾ ಪರಮಹಂಸರ ಕೋಣೆಯ ಕಡೆಗೆ ಹೋಗುವಾಗ, ಅವರೇ ಮುಂದೆ ಬಂದು, "ನೀನು ಏನು ತಂದಿದ್ದೀಯಾ?" ಎಂದರು. ಯೋಗಿನ್‌ಮಾ ಹೂವುಗಳನ್ನು ತೋರಿಸಿ, ಅವರ ಪಾದಗಳಿಗೆ ಸಮರ್ಪಿಸಿ ನಮಸ್ಕರಿಸಿದರು. ಆಗ ಪರಮಹಂಸರು ಭಾವಸಮಾಧಿಸ್ಥರಾಗಿ ತಮ್ಮ ಪಾದವನ್ನು ಯೋಗಿನ್‌ಮಾ ತಲೆಯ ಮೇಲಿರಿಸಿ ಆಶೀರ್ವದಿಸಿದರು. ಮುಂದೆ ಯೋಗಿನ್‌ಮಾ ಹೇಳುತ್ತಿದ್ದರು, "ನನಗೆ ಅಧ್ಯಾತ್ಮಜೀವನದಲ್ಲಿ ಯಾವ ಸಂಶಯ ಬಂದರೂ, ದಕ್ಷಿಣೇಶ್ವರಕ್ಕೆ ಹೋದಾಗ ನಾನು ಕೇಳದೆಯೇ ಆ ಸಂಶಯಕ್ಕೆ ಸಮಾಧಾನ ಸಿಕ್ಕುತ್ತಿತ್ತು."

ಒಂದು ದಿನ ಯೋಗಿನ್‌ಮಾ ತಮ್ಮ ವೃದ್ಧ ತಾಯಿಯನ್ನು ಮತ್ತು ಮಗಳು ಗಾನುವನ್ನು ದಕ್ಷಿಣೇಶ್ವರಕ್ಕೆ ಕರೆತಂದರು. ಆಗ ಅವರ ಪತಿ ಅಂಬಿಕಾಚರಣ ಕೂಡ ತಮ್ಮ ಜೀವನವನ್ನು ಪರಿವರ್ತಿಸಿಕೊಳ್ಳಲು ಪ್ರಯತ್ನಿಸಿದರು. ಇದಕ್ಕೆ ಯೋಗಿನ್‌ಮಾ ಬೆಂಬಲ ನೀಡಿದರು. ಆದರೆ ದುರದೃಷ್ಟವಶಾತ್ ನಾಯಿ ಕಚ್ಚಿದ್ದರಿಂದ ಅಂಬಿಕಾಚರಣ ಸ್ವಲ್ಪಕಾಲ ನರಳಿ, ಅನಂತರ ಮರಣ ಹೊಂದಿದರು. ಅವರ ಕಡೆಯ ದಿನಗಳಲ್ಲಿ ಪರಮಹಂಸರು ಯೋಗಿನ್‌ಮಾರಿಗೆ ಪತಿಯ ಸೇವೆ ಮಾಡಲು ಹೇಳಿದರು. ಯೋಗಿನ್‌ಮಾ ಪತಿಯನ್ನು ತಮ್ಮ ತವರುಮನೆಗೆ ಕರೆತಂದು, ಅಲ್ಲಿ ಅವರಿಗೆ ಬಹಳ ಶ್ರದ್ಧೆಯಿಂದ ಸೇವೆ ಸಲ್ಲಿಸಿದರು. ಇದಾದ ಮೇಲೆ ಯೋಗಿನ್‌ಮಾ, ತನ್ನ ಮಗಳು ಗಾನು ಮತ್ತು ಆಕೆಯ ಮೂರು ಮಕ್ಕಳೊಡನೆ ತವರುಮನೆಯಲ್ಲಿಯೇ ಉಳಿದರು.

ಸಂಸಾರಜೀವನದ ದುಃಖದುಮ್ಮಾನಗಳಿಂದ ಯೋಗಿನ್‌ಮಾರ ಮನಸ್ಸು ಮೊದಲೇ ವಿರಕ್ತಿಗೊಂಡಿತ್ತು. ಅವರು ಮತ್ತೆ ಮತ್ತೆ ದಕ್ಷಿಣೇಶ್ವರಕ್ಕೆ ಬರುತ್ತಿದ್ದರು ಮತ್ತು ಪರಮಹಂಸರ ಜೊತೆಯಲ್ಲಿ ಅನೇಕ ಉತ್ಸವಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಬಲರಾಮಬಾಬುವಿನ ಮನೆಯಲ್ಲಿ ನಡೆಯುತ್ತಿದ್ದ ರಥಯಾತ್ರೆಯಲ್ಲಿಯೂ ಅವರು ಭಾಗವಹಿಸುತ್ತಿದ್ದರು. ಯೋಗಿನ್‌ಮಾ ಅವರ ಭಕ್ತಿಶ್ರದ್ಧೆಗಳಿಂದ ಸಂಪ್ರೀತರಾಗಿ ಶ್ರೀರಾಮಕೃಷ್ಣರು ೧೮೮೫ ರ ಜುಲೈ ೨೮ ರಂದು ಭಕ್ತರೊಡನೆ ಅವರ ಮನೆಗೆ ಭೇಟಿ ಇತ್ತರು. ಯೋಗಿನ್‌ಮಾ ಶ್ರೀರಾಮಕೃಷ್ಣರನ್ನು ತಮ್ಮ ಮನೆಯ ಒಳಗಿನ ಕೋಣೆಗೆ ಕರೆದುಕೊಂಡು ಹೋಗಿ, "ನಿಮ್ಮ ಪಾದಸ್ಪರ್ಶದಿಂದ ಈ ಕೋಣೆ ವಾರಾಣಸಿಯಾಗಿ ಮಾರ್ಪಾಡಾಯಿತು" ಎಂದು ಹೇಳುತ್ತ ಆನಂದಪಟ್ಟರು.

ಒಂದು ದಿನ ಯೋಗಿನ್‌ಮಾ ಶ್ರೀರಾಮಕೃಷ್ಣರನ್ನು ಕೇಳಿದರು, "ನನ್ನ ಮುಂದಿನ ಗತಿಯೇನು?" ಇದಕ್ಕೆ ಶ್ರೀರಾಮಕೃಷ್ಣರು ಹೇಳಿದರು, "ನಿನಗೆ ಇನ್ನೇನು ಬೇಕು? ನನ್ನ ದರ್ಶನವಾಗಿದೆ, ನನ್ನ ಸೇವೆ ಮಾಡಿದ್ದೀಯೆ ಮತ್ತು ಅನೇಕ ಬಾರಿ ಊಟ ಉಪಚಾರಗಳನ್ನು ಕೂಡ ಮಾಡಿದ್ದೀಯೆ. ನೀನು ಏನೂ ಯೋಚನೆ ಮಾಡಬೇಡ, ಮೃತ್ಯುಸಮಯದಲ್ಲಿ ನಿನ್ನ ಸಹಸ್ರಾರದಲ್ಲಿರುವ ಸಾವಿರದಳಗಳ ಕಮಲ ಖಂಡಿತವಾಗಿ ಅರಳುವುದು. ಭಕ್ತರ ಕಡೆಗಾಲದಲ್ಲಿ ನಾನು ದರ್ಶನ ಕೊಡಲೇಬೇಕು. ಇಲ್ಲದಿದ್ದರೆ ಅವರು ಹೇಗೆ ತಾನೇ ಮುಕ್ತಿಗಳಿಸುವರು?" ಶ್ರೀರಾಮಕೃಷ್ಣರ ನಿರ್ದೇಶನದಂತೆ ಯೋಗಿನ್‌ಮಾ